## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಎಸ್.ಸಿ ಸಂಖ್ಯೆಃ 78/2023

ಪ್ರಾಸಾಃ1
ಚಾಸಾಃ4

ಸಾಕ್ಷಿದಾರರ ಹೆಸರು: ರವಿ

ತಂದೆಯ ಹೆಸರು : ಕುಮಾರೇಗೌಡ

ವಯಸ್ಸು : 45 ವರ್ಷ

ವೃತ್ತಿ : ಗಾರೆ ಕೆಲಸ

ವಾಸ : ಹಂಡ್ಲಿ ಗ್ರಾಮ.

**ಸಾಕ್ಷಿಯನ್ನು ದಿನಾಂಕ 19-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ-1 ರಿಂದ ಚಾಸಾ-3 ಹಾಗೂ ಚಾಸಾ-5 ರವರ ಪರಿಚಯ ಇದೆ. ಚಾಸಾ-1 ರಿಂದ ಚಾಸಾ-3 ನಾಕಲಗೂಡಿನ 15 ಸೆಂಟ್ಸಿನ ಜಾಗದಲ್ಲಿ ಒಂದು ಶೆಡ್ ಹಾಕಿಕೊಂಡು ವಾಸವಾಗಿದ್ದಾರೆ. ಚಾಸಾ-2 ಸದರಿ ಜಾಗವನ್ನು ಮಂಜೂರು ಮಾಡಿಕೊಡಬೇಕು ಎಂದು 2018 ನೇ ಇಸವಿಯಲ್ಲಿ ತಾಲ್ಲೂಕು ಕಛೇರಿಗೆ ಅರ್ಜಿ ಕೊಟ್ಟಿದ್ದರು.

2. ದಿನಾಂಕ 18-07-2022 ರಂದು ನಾನು ಗಾರೆ ಕೆಲಸಕ್ಕಾಗಿ ನಾಕಲಗೂಡು ಕಡೆಗೆ ಬೈಕಿನಲ್ಲಿ ಬೆಳಿಗ್ಗೆ 7.30 ಗಂಟೆ ಸಮಯಕ್ಕೆ ಹೋಗುತಿದ್ದೆ. ಚಾಸಾ-2 ರವರ ಮನೆಯ ಬಳಿ ಗಲಾಟೆ ಆಗುತಿತ್ತು. ನಾನು ಬೈಕ್ ನಿಲ್ಲಿಸಿ ಅಲ್ಲಿಗೆ ಹೋದೆ. ಆಗ ಚಾಸಾ-5 ರವರು ಸಹ ಅಲ್ಲಿಗೆ ಬಂದರು. ಅಲ್ಲಿ ಆರೋಪಿತರು ಮತ್ತು ಚಾಸಾ-1 ಹಾಗೂ ಚಾಸಾ-2 ಇದ್ದರು. ಲಕ್ಷ್ಮೀ ಎಂಬುವವರು ಚಾಸಾ-1 ರವರ ಕುತ್ತಿಗೆಗೆ

ಕಾಲಿನಿಂದ ತುಳಿಯುತಿದ್ದರು. 2 ನೇ ಆರೋಪಿ ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಹೊಡೆದು, ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದ. 1 ನೇ ಆರೋಪಿ ಚಾಸಾ-2 ರವರ ಬಳಿಗೆ ಹೋಗಿ ಅವರ ಶರ್ಟ್ ಜೇಬಿಗೆ ಕೈ ಹಾಕಿ ಏನೋ ತೆಗೆದುಕೊಂಡು ಹೋದರು. ಆ ಬಳಿಕ ಚಾಸಾ-2 ರವರನ್ನು ವಿಚಾರಣೆ ಮಾಡಲು ಅವರು ಮನೆ ಕೆಲಸಕ್ಕೆಂದು ಇಟ್ಟಿದ್ದ 25,000/- ರೂಪಾಯಿಗಳನ್ನು 1 ನೇ ಆರೋಪಿ ಕಿತ್ತುಕೊಂಡು ಹೋದ ಎಂದು ಹೇಳಿದರು. ಮುಂದುವರೆದು ಇದನ್ನೂ ಯಾರಿಗಾದರೂ ಹೇಳಿದರೆ ಕೊಲೆ ಮಾಡುತ್ತೇನೆ ಎಂದು ಹೇಳಿದ್ದರು. ಆ ಬಳಿಕ ಆರೋಪಿಗಳು ಅಲ್ಲಿಂದ ಓಡಿ ಹೋದರು. ಚಾಸಾ-1 ಆ ಬಳಿಕ ದೂರು ನೀಡಿದ್ದರು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದೊಣ್ಣೆ ಆ ದಿನ ಆರೋಪಿಗಳು ಚಾಸಾ-1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದ ದೊಣ್ಣೆ ಆಗಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಪೊಲೀಸರು ನನ್ನಿಂದ ಹೇಳಿಕೆ ಪಡೆದುಕೊಂಡಿದ್ದಾರೆ.

**<u>ಪಾಟೀಸವಾಲು- 5 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ. ವಕೀಲರಿಂದಃ</u>**

3. ನಾನು S.S.L.C ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಿನಾಂಕ 18-07-2022 ರಂದು ನನ್ನನ್ನು ಪೊಲೀಸರು ಈ ಪ್ರಕರಣದಲ್ಲಿ ವಿಚಾರಣೆ ಮಾಡಿದ್ದಾರೆ. ಗಲಾಟೆ ಆದ ವಿಚಾರದಲ್ಲಿ ಯಾರು ಯಾರು ಏನು ಏನು ಮಾಡಿದ್ದರು ಎಂದು ಪೊಲೀಸರು ನನ್ನನ್ನು ಠಾಣೆಯಲ್ಲಿ ವಿಚಾರಿಸಿದ್ದರು. ದಿನಾಂಕ 18-07-2022 ರಂದು ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಲು ಆ ದಿನ ದೂರು ದಾಖಲಾಗಿರಲಿಲ್ಲ ಆ ಕಾರಣದಿಂದ ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸಾಕ್ಷಿ ನನಗೆ ಪೊಲೀಸರು ನನ್ನನ್ನು ಯಾವ ತಾರೀಖಿನಂದು ವಿಚಾರಣೆ ಮಾಡಿದ್ದರು ಎಂದು ಮರೆತುಹೋಗಿದೆ ಎಂದು ನುಡಿಯುತ್ತಾರೆ. ನಾನು ಎಲ್ಲಾ

ಕಡೆ ಗಾರೆ ಕೆಲಸ ಮಾಡುತ್ತೇನೆ. ಗಲಾಟೆ ಆಗಿದೆ ಎಂದು ಹೇಳಲಾಗುವ ಸ್ಥಳದಿಂದ ನನ್ನ ಮನೆಗೆ 3 ಕಿಲೋಮೀಟರ್ ದೂರ ಇದೆ. ನಾನು ಸಹ ಸ್ವತಃ ಗಾರೆ ಕೆಲಸ ಮಾಡುತ್ತೇನೆ. ಚಾಸಾ-3 ಹಾಗೂ ನಾನು ಸೇರಿಕೊಂಡು ಯಾವುದೇ ಕೆಲಸ ಮಾಡಿಲ್ಲ. ನನಗೆ ಕೆಲಸ ಇದ್ದರೆ ಮಾತ್ರ ನಾನು ಆ ರಸ್ತೆಯಲ್ಲಿ ಹೋಗುತ್ತೇನೆ.

4. ದಿನಾಂಕ 18-07-2022 ರಂದು ನನಗೆ ನಾಕಲಗೂಡಿನಲ್ಲಿ ಗಾರೆ ಕೆಲಸ ಇತ್ತು. ಪರಮೇಶ್ ಆಚಾರ್ (ಚಾಸಾ-8) ಅವರ ಮನೆಯ ಹತ್ತಿರ ನನಗೆ ಕೆಲಸ ಇತ್ತು. ಅವರು ಮರದ ಕೆಲಸ ಮಾಡುತ್ತಾರೆ. ನಾನು ಚಾಸಾ-8 ರವರ ಮನೆಗೆ ಹೋದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ಗಲಾಟೆ ಆಯಿತು ಎಂದು ಹೇಳುವ ಸ್ಥಳದಿಂದ ಚಾಸಾ-8 ರವರ ಮನೆಗೆ 100 ಮೀಟರ್ ದೂರ ಇದೆ. ಬೆಳಿಗ್ಗೆ 7.30 ಗಂಟೆಯಿಂದ ಅರ್ಧ ಮುಕ್ಕಾಲು ಗಂಟೆಗಳ ಕಾಲ ನಾನು ಗಲಾಟೆ ಆಯಿತು ಎಂದು ಹೇಳುವ ಮನೆಯಲ್ಲಿ ಇದ್ದೆ. ಆ ದಿನ ಚಾಸಾ-8 ರವರ ಮನೆಗೆ ತಲುಪಿದಾಗ ಎಷ್ಟು ಗಂಟೆ ಆಗಿರಬಹುದು ಎಂದು ನಾನು ನೋಡಿಲ್ಲ. ನನ್ನ ಬೈಕ್ ಹೋಂಡಾ ಶೈನ್ ಆಗಿದ್ದು, ಅದರ ನಂಬರ್ KA-12-S-2806 ಆಗಿದೆ. ನನ್ನ ಮನೆಯಿಂದ ನಾಕಲಗೂಡಿಗೆ ಬರುವಾಗ ಗಲಾಟೆ ಆಯಿತು ಎಂದು ಹೇಳುವ ಸ್ಥಳ ರಸ್ತೆಯ ಎಡಭಾಗದಲ್ಲಿ ಇದೆ. ಅದು ಶೀಟ್ ಮನೆ ಆಗಿತ್ತು. ಅದರ ಮುಂಭಾಗದಲ್ಲಿ ಮತ್ತು ಒಳಗಡೆ ಪ್ಲಾಸ್ಟರಿಂಗ್ ಆಗಿತ್ತು. ರಸ್ತೆಯಿಂದ 20 ಅಡಿ ದೂರದಲ್ಲಿ ಗಲಾಟೆ ಆಗಿದೆ ಎಂದು ಹೇಳುವ ಮನೆ ಇತ್ತು. ನಾನು ಆ ದಿನ ಚಾಸಾ-8 ರವರ ಮನೆಗೆ ಬೈಕಿನಲ್ಲಿ ಹೋಗಿದ್ದೆ. ಆ ದಿನ ನಾನು ಹೆಲ್ಮೆಟ್ ಹಾಕಿದ್ದೆ. ಮನೆಯ ಮುಂದುಗಡೆ ಬೈಕು, ಕಾರುಗಳು ಸೇರಿ ಐದಾರು ಗಾಡಿಗಳು ಇದ್ದವು.

5. ಚಾಸಾ-2 ರವರನ್ನು ನನಗೆ ಪರಿಚಯ ಇದ್ದ ಕಾರಣ ಅವರ ಮನೆ ಎದುರು ಗಲಾಟೆ ಆಗಿದೆ ಎಂದು ನಾನು ಹೇಳಿದ್ದೆ. ಸದರಿ ಮನೆ ಕಟ್ಟಿ ಎರಡು-ಮೂರು ತಿಂಗಳು ಆಗಿರಬಹುದು. ನಾನು ಸದರಿ ಸ್ಥ,ಳಕ್ಕೆ ಹೋಗುವ ಸಂದರ್ಭದಲ್ಲಿ

ಅವರು ಏನು ಕಿರುಚಾಡುತಿದ್ದರು ಎಂದು ಸ್ಪಷ್ಟವಾಗಿ ನನಗೆ ಕೇಳುತ್ತಿರಲಿಲ್ಲ. ನಾನು ಮನೆಯ ಒಳಗಡೆ ಹೋದಾಗ ಅಲ್ಲಿ 8 ರಿಂದ 10 ಜನ ಇದ್ದರು. ಲಕ್ಷ್ಮಿ, ನಾಗಯ್ಯ, ಶಶಾಂಕ್, ಬಸವರಾಜು, ಚಿದಾನಂದ, ಸಣ್ಣಪ್ಪ, ವೇದಾವತಿ ಹಾಗೂ ಮಂಜುನಾಥ ಮತ್ತು ಚಾಸಾ-5 ಇದ್ದರು. ಮು.ಮಾ-1 ರ ದೊಣ್ಣೆಯನ್ನು 2 ನೇ ಆರೋಪಿ ಮನೆಯ ಒಳಗಿನಿಂದ ಹೊರಗೆ ತೆಗೆದುಕೊಂಡು ಬಂದಿದ್ದರು. ಚಾಸಾ-1 ಬಗ್ಗಿದಾಗ ಅವರ ತಲೆಗೆ ಹಲ್ಲೆ ಮಾಡಿದ್ದರು. 2 ನೇ ಆರೋಪಿಗೆ ಮುಖ ಮಾಡಿ ಚಾಸಾ-1 ಮುಂದಕ್ಕೆ ಬಗ್ಗಿದ್ದರು ಆಗ ರಕ್ತ ಗಾಯವಾಗಿತ್ತು ಅದನ್ನು ನಾನು ನೋಡಿದ್ದೇನೆ. ಚಾಸಾ-1 ರವರನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆದರೂ ಎಂದು ಹೇಳುವ ಸಮಯದ ಬಳಿಕ ನಾನು ಮನೆಯ ಒಳಗಡೆ ಇದ್ದ ಮಂಜುನಾಥ ರವರ ಜೊತೆ ಮಾತನಾಡಿದ್ದೆ. ಸಣ್ಣಪ್ಪ ಅವರು ಮಂಜುನಾಥ ಅವರ ಶರ್ಟ್ ಕಿಸೆಯಿಂದ ಏನನ್ನೋ ತೆಗೆದುಕೊಂಡು ಹೋದರು ಅದು ಏನು ಎಂದು ನಾನು ನೋಡಿಲ್ಲ. ನಾನು ಅಲ್ಲಿಂದ ಬರುವವರೆಗೂ ಆರೋಪಿಗಳು ಅಲ್ಲಿಯೇ ಇದ್ದರು. ಗಾಯಾಳುಗಳ ಬಳಿ ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದೆ. ಗಾಯಾಳುಗಳು ಅವರೇ ಆಟೋದಲ್ಲಿ ಆಸ್ಪತ್ರೆಗೆ ಹೋದರು. ಆ ಬಳಿಕ ನಾನು ಚಾಸಾ-8 ರವರ ಮನೆಗೆ ಹೋಗಿ ನನ್ನ ಮನೆಗೆ ಹೋದೆ.

6. ಸದರಿ ಮನೆ ಒಂದೇ ಕೋಣೆಯ ಮನೆ ಆಗಿದೆ. ಗಲಾಟೆ ಆದ ವಿಚಾರವನ್ನು ನಾನು ಚಾಸಾ-8 ರವರ ಬಳಿ ಹೇಳಿರಲಿಲ್ಲ ಏಕೆಂದರೆ ಚಾಸಾ-8 ಅಲ್ಲಿ ಅವರ ಮನೆಯಲ್ಲಿ ಇದ್ದಿರಲಿಲ್ಲ. ಚಾಸಾ-8 ರವರಿಗೆ ಫೋನ್ ಮಾಡಿ ನಾನು ಅವರ ಮನೆಗೆ ಬಂದ ವಿಚಾರವನ್ನು ನಾನು ಹೇಳಿರಲಿಲ್ಲ ಏಕೆಂದರೆ ನನ್ನ ಬಳಿ ಫೋನ್ ಇರಲಿಲ್ಲ. ಮಾರನೇ ದಿನ ನಾನು ಚಾಸಾ-8 ರವರಿಗೆ ಹೇಳಿದ್ದೆ. ಗಲಾಟೆ ಆದ ವಿಚಾರವನ್ನು ನಾನು ಚಾಸಾ-8 ರವರಿಗೆ ಹೇಳಿದ್ದೆ. ನಾನು ಚಾಸಾ-8 ರವರ ಬಳಿ

ದೂರು ದಾಖಲಾಗಿದೆ ಮತ್ತು ಠಾಣೆಗೆ ಹೋಗಿದ್ದಾರೆ ಎಂದು ಹೇಳಿದ್ದೆ. 2 ನೇ ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿದ ನಂತರ ಸದರಿ ದೊಣ್ಣೆಯನ್ನು ಅಲ್ಲೇ ಎಸೆದು ಹೋದರು. ಅವರು ಮನೆಯ ಒಳಗಡೆ ಎಸೆದಿದ್ದರೋ ಅಥವಾ ಹೊರಗಡೆ ಎಸೆದಿದ್ದರೋ ಎಂದು ನಾನು ನೋಡಿಲ್ಲ. ಸದರಿ ದೊಣ್ಣೆ ಬಿದಿರಿನ ದೊಣ್ಣೆಯಾಗಿದ್ದು, ಎರಡ ರಿಂದ ಎರಡೂವರೆ ಅಡಿ ಉದ್ದ ಇತ್ತು. ಮು.ಮಾ-1 ರ ದೊಣ್ಣೆ ಬಿದಿರಿನ ದೊಣ್ಣೆ ಅಲ್ಲ.

7. ನಾನು ದಿನಾಂಕ 18-07-2022 ರಂದು ಚಾಸಾ-8 ರವರ ಮನೆಗೆ ಹೋಗುತಿದ್ದಾಗ ಚಾಸಾ-2 ರವರ ಮನೆಯ ಬಳಿ ಗಲಾಟೆ ಕೇಳಿ ಅಲ್ಲಿಗೆ ಹೋಗಿದ್ದೆ ಮತ್ತು ಆರೋಪಿಗಳು ಚಾಸಾ-1 ರವರಿಗೆ ನನ್ನ ಸಮಕ್ಷಮದಲ್ಲಿ ಹಲ್ಲೆ ಮಾಡಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1, ಚಾಸಾ-2, ಚಾಸಾ-3 ಹಾಗೂ ಚಾಸಾ-8 ಮತ್ತು ನಾವು ಒಟ್ಟಿಗೆ ಕೆಲಸ ಮಾಡುವವರು ಆ ಕಾರಣದಿಂದ ಅವರಿಗೆ ಸಹಾಯ ಮಾಡಲು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

8. ನಾನು ಪೊಲೀಸ್ ಠಾಣೆಗೆ ಎರಡು-ಮೂರು ದಿನದಲ್ಲಿ ಹೋಗಿದ್ದೆ. ನಮ್ಮ ಮನೆಗೆ ಪೊಲೀಸರೆ ಬಂದು ನನ್ನನ್ನು ಕರೆದು ಠಾಣೆಗೆ ಬರಲು ಹೇಳಿದ್ದರು. ಯಾರು ವಿಚಾರಣೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಶನಿವಾರಸಂತೆಯಲ್ಲಿ ಇರುವ ಗಣಪತಿ ದೇವಸ್ಥಾನದ ಹಿಂಭಾಗದಲ್ಲಿ ಪೊಲೀಸ್ ಠಾಣೆ ಇದೆ. ಗಣಪತಿ ದೇವಸ್ಥಾನ ಇರುವ ಸ್ಥಳಕ್ಕೆ ಮಧ್ಯಪೇಟೆ ಎಂದು ಹೇಳುತ್ತಾರೆ. ನಾನು ಠಾಣೆಗೆ ಹೋದಾಗ ಒಬ್ಬನೇ ಹೋಗಿದ್ದೆ. ನಾನು ಠಾಣೆಗೆ ಹೋಗುತಿದ್ದೇನೆ ಎಂದು ಯಾರಿಗೂ ತಿಳಿಸಿರಲಿಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಆರೋಪಿಗಳು ಯಾವುದೇ ಕೃತ್ಯ ಎಸಗಿರಲಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ

ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲಾಗಿದ್ದು, ನಾನು ಅದರಲ್ಲಿ 4 ನೇ ಆರೋಪಿ ಎಂದರೆ ಸರಿ. ಸಣ್ಣಪ್ಪ ಅವರು ಮನೆ ಕಟ್ಟುವ ವಿಚಾರದಲ್ಲಿ ನನ್ನ ಮೇಲೆ ಪ್ರಕರಣ ದಾಖಲಿಸಿದ್ದರು. ನನ್ನ ಮೇಲೆ ಪ್ರಕರಣ ದಾಖಲಾದ ನಂತರ ಈ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನನ್ನ ಮೇಲೆ ಪ್ರಕರಣ ದಾಖಲಾದ ಕಾರಣ ಅದನ್ನು ತಪ್ಪಿಸಲು ನಾನು ವೇದಾವತಿ ಅವರ ಮುಖಾಂತರ ಈ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ**

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಸಿ.ಎಸ್.ಪಿ. ವಕೀಲರಿಂದಃ**

1 ರಿಂದ 4 ನೇ ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಬೇಕು ಎಂದು ಅರ್ಜಿ ಸಲ್ಲಿಸಿದ್ದು, ಸಾಕ್ಷಿಗೆ ಪ್ರಯಾಣ ಭತ್ಯೆಯನ್ನು ಕೊಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ